**National**
**Kannada**
**21.09.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಸಂಜೆ ಐದು ಗಂಟೆಗೆ ರಾಷ್ಟ್ರದ ಜನತೆಯನ್ನು ಉದ್ದೇಶಿಸಿ ಭಾಷಣ
2. ವ್ಯಾಪಾರ ಒಪ್ಪಂದದ ಕುರಿತು ಮಾತುಕತೆ ಚುರುಕುಗೊಳಿಸಲು ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯಲ್ ನೇತೃತ್ವದ ನಿಯೋಗ ನಾಳೆ ಅಮೆರಿಕಕ್ಕೆ ಪಯಣ
3. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ಮೊರಾಕೊಗೆ ಅಧಿಕೃತ ಭೇಟಿ: ದ್ವಿಪಕ್ಷೀಯ ಮಾತುಕತೆ
4. ಪಿತೃ ಪಕ್ಷದ ಅಂತ್ಯ, ನವರಾತ್ರಿಯ ಆರಂಭದ ಸೂಚಕ ಮಹಾಲಯ ಅಮವಾಸ್ಯೆ ದೇಶಾದ್ಯಂತ ಆಚರಣೆ: ಪ್ರಧಾನಿ ಸೇರಿ ಗಣ್ಯರ ಶುಭಾಶಯ
5. ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ: ಪುರುಷರ ಡಬಲ್ಸ್ ಫೈನಲ್‌ನಲ್ಲಿಂದು ಭಾರತದ ಸಾತ್ವಿಕ್ -ಚಿರಾಗ್ ಶೆಟ್ಟಿ ಜೋಡಿ ಸೆಣಸು

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಸಂಜೆ ಐದು ಗಂಟೆಗೆ ರಾಷ್ಟ್ರದ ಜನತೆಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

<><><><>

ಪ್ರಧಾನಿ ನರೇಂದ್ರ ಮೋದಿ ನಾಳೆ ಅರುಣಾಚಲ ಪ್ರದೇಶ ಮತ್ತು ತ್ರಿಪುರಾಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ಅವರು ಐದು ಸಾವಿರದ ನೂರು ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಅರುಣಾಚಲ ಪ್ರದೇಶದಲ್ಲಿ, ಅವರು ಮೂರು ಸಾವಿರದ ೭೦೦ ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಎರಡು ಪ್ರಮುಖ ಜಲವಿದ್ಯುತ್ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ ಅವರು ಇಟಾನಗರದಲ್ಲಿ ಸಾರ್ವಜನಿಕ ಸಮಾರಂಭ ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಇತ್ತೀಚಿನ ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮದ ಕುರಿತು ಸ್ಥಳೀಯ ತೆರಿಗೆದಾರರು, ವ್ಯಾಪಾರಿಗಳು ಮತ್ತು ಕೈಗಾರಿಕಾ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ತ್ರಿಪುರಾದಲ್ಲಿ, ಪ್ರಧಾನಮಂತ್ರಿ ಅವರು ತೀರ್ಥಯಾತ್ರೆ ಪುನರುಜ್ಜೀವನ ಮತ್ತು ಆಧ್ಯಾತ್ಮಿಕ ಪರಂಪರೆ ವೃದ್ಧಿ ಯೋಜನೆಯಡಿಯಲ್ಲಿ

ಮತಾಬರಿಯಲ್ಲಿರುವ ಮಾತಾ ತ್ರಿಪುರ ಸುಂದರಿ ದೇವಾಲಯ ಸಂಕೀರ್ಣದ ಅಭಿವೃದ್ಧಿ ಕಾರ್ಯ ಉದ್ಘಾಟಿಸಲಿದ್ದಾರೆ.

<><><>

ವ್ಯಾಪಾರ ಒಪ್ಪಂದದ ಕುರಿತು ಮಾತುಕತೆಗಳನ್ನು ಮತ್ತಷ್ಟು ಚುರುಕುಗೊಳಿಸಲು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರು ನಾಳೆ ಅಮೆರಿಕಕ್ಕೆ ನಿಯೋಗದೊಂದಿಗೆ ಪ್ರಯಾಣ ಬೆಳೆಸಲಿದ್ದಾರೆ. ಉಭಯ ದೇಶಗಳಿಗೂ ಪರಸ್ಪರ ಪ್ರಯೋಜನಕಾರಿಯಾಗಿರುವ ವ್ಯಾಪಾರ ಒಪ್ಪಂದದ ಆರಂಭಿಕ ತೀರ್ಮಾನವನ್ನು ಸಾಧಿಸುವ ಉದ್ದೇಶದಿಂದ ನಿಯೋಗವು ಚರ್ಚೆಗಳನ್ನು ಮುಂದುವರಿಸಲಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಇದೇ ೧೬ ರಂದು ಭಾರತಕ್ಕೆ ಭೇಟಿ ನೀಡಿದ್ದ ಅಮೆರಿಕದ ವ್ಯಾಪಾರ ಪ್ರತಿನಿಧಿಯು ಅಧಿಕಾರಿಗಳ ಭೇಟಿಯ ಸಮಯದಲ್ಲಿ, ವ್ಯಾಪಾರ ಒಪ್ಪಂದದ ವಿವಿಧ ಅಂಶಗಳ ಕುರಿತು ಸಕಾರಾತ್ಮಕ ಚರ್ಚೆಗಳು ನಡೆದವು ಮತ್ತು ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ತೀವ್ರಗೊಳಿಸಲು ನಿರ್ಧರಿಸಲಾಯಿತು ಎಂದು ಸಚಿವಾಲಯ ತಿಳಿಸಿದೆ.

<><><>

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಇಂದು ಮೊರಾಕೊಗೆ ಅಧಿಕೃತ ಭೇಟಿ ನೀಡಲಿದ್ದಾರೆ. ಇದು ಉತ್ತರ ಆಫ್ರಿಕಾದ ರಾಷ್ಟ್ರಕ್ಕೆ ರಕ್ಷಣಾ ಸಚಿವರೊಬ್ಬರ ಮೊದಲ ಭೇಟಿ ಆಗಿದ್ದು, ಭಾರತ ಮತ್ತು ಮೊರಾಕೊ ನಡುವೆ ಹೆಚ್ಚುತ್ತಿರುವ ಸಮನ್ವಯದ ದ್ಯೋತಕವಾಗಿದೆ. ರಾಜನಾಥ್ ಸಿಂಗ್ ಅವರು ಮೊರಾಕೊದ ಸಹವರ್ತಿ ಅಬ್ದೆಲ್ಟಿಫ್ ಲೌಡಿಯಿ ಅವರೊಂದಿಗೆ ರಕ್ಷಣಾ, ಕಾರ್ಯತಂತ್ರ ಮತ್ತು ಕೈಗಾರಿಕಾ ಸಹಕಾರ ಬಲವರ್ಧನೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ.

ಸಚಿವರು ತಮ್ಮ ಭೇಟಿಯ ಸಮಯದಲ್ಲಿ ರಬತ್‌ನಲ್ಲಿರುವ ಚೈತನ್ಯಶೀಲ ಭಾರತೀಯ ಸಮುದಾಯದೊಂದಿಗೆ ಸಂವಹನ ನಡೆಸಲಿದ್ದಾರೆ.

<><><>

ದೇಶದ ವಿವಿಧ ಭಾಗಗಳಲ್ಲಿ ಇಂದು ಮಹಾಲಯ ಅಮವಾಸ್ಯೆಯನ್ನು ಆಚರಿಸಲಾಗುತ್ತಿದೆ. ಮಹಾಲಯ ಅಮವಾಸ್ಯೆಯು ಪಿತೃ ಪಕ್ಷದ ಅಂತ್ಯ ಮತ್ತು ನವರಾತ್ರಿಯ ಆರಂಭದ ಸೂಚಕವಾಗಿದೆ. ಮಹಾಲಯ ಅಮವಾಸ್ಯೆಯನ್ನು ದುರ್ಗಾ ದೇವಿಯು ಮಹಿಷಾಸುರನನ್ನು ಸೋಲಿಸಿದ ದಿನವೆಂದು ಹೇಳಲಾಗುತ್ತಿದೆ. ಈ ದಿನದದು ಜನರು ತಮ್ಮ ಪೂರ್ವಜರಿಗೆ ಆಹಾರ ಮತ್ತು ನೀರಿನ ಅರ್ಪಣೆಗಳನ್ನು ಮಾಡುವ ಸಂಪ್ರದಾಯವೂ ಚಾಲ್ತಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಹಾಲಯದ ಅಮವಾಸ್ಯೆಯ ಸಂದರ್ಭದಲ್ಲಿ ಸದಾಶಶಯಗಳನ್ನು ತಿಳಿಸಿದ್ದಾರೆ. ದುರ್ಗಾ ಪೂಜೆಯ ಶುಭ ದಿನಗಳು ಸಮೀಪಿಸುತ್ತಿದ್ದಂತೆ, ಜನರ ಜೀವನವು ಸದಾ ಪ್ರಕಾಶಿಸುತ್ತಿರಲಿ ಎಂದು ಆಶಿಸಿರುವ ಪ್ರಧಾನಿ, ಮಾತೆ ದುರ್ಗಾದೇವಿ ಎಲ್ಲರಿಗೂ

ಶಕ್ತಿ, ಸಂತೋಷ ಮತ್ತು ಉತ್ತಮ ಆರೋಗ್ಯ ನೀಡಲಿ ಎಂದು ಹಾರೈಸಿದ್ದಾರೆ. ದುರ್ಗಾ ಮಾತೆಯ ಅಪರಿಮಿತ ವಾತ್ಸಲ್ಯವು ಪ್ರತಿಯೊಂದು ಮನೆಯಲ್ಲೂ ಸಂತೋಷ, ಶಕ್ತಿ, ಸಮೃದ್ಧಿ ಮತ್ತು ಉತ್ತಮ ಆರೋಗ್ಯ ನೆಲೆಸುವಂತೆ ಮಾಡಲಿ ಎಂದು ಅಮಿತ್ ಶಾ ತಮ್ಮ ಸಂದೇಶದಲ್ಲಿ ಹಾರೈಸಿದ್ದಾರೆ.

<><><>

ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದ ಧ್ಯೇಯದೊಂದಿಗೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ದೇಶದಲ್ಲಿ ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿರತವಾಗಿ ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ ವಿಶೇಷ ಸರಣಿ - "ಸೇವಾ ಪರ್ವ" ದಲ್ಲಿಂದು, ರೈತರಿಗೆ ಆರ್ಥಿಕ ಭದ್ರತೆಯನ್ನು ಕೇಂದ್ರ ಸರ್ಕಾರ ಯಾವ ರೀತಿ ಬಲಪಡಿಸುತ್ತಿದೆ ಎಂಬುದರ ಕುರಿತ ಒಂದು ವಿಶೇಷ ವರದಿ ಇದೀಗ ಮೂಡಿಬರಲಿದೆ.

ಈ ಕುರಿತು ಒಂದು ವರದಿ : ಅಭಯ್ (೧ ನಿಮಿಷ ೧೫ ಸೆಕೆಂಡ್‌ಗಳು)

ರೈತರು ಭಾರತದ ಬೆಳವಣಿಗೆಯ ಪಥದ ಕೇಂದ್ರಬಿಂದು. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಕೇಂದ್ರೀಕೃತ ಸುಧಾರಣೆಗಳು ಕೃಷಿಕರನ್ನು ಅನಿಶ್ಚಿತ ಆದಾಯದಿಂದ ಖಚಿತ ಸಮೃದ್ಧಿಯತ್ತ ಕೊಂಡೊಯ್ದಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನುಡಿಗಳಲ್ಲೇ ಕೇಳುವುದಾದರೆ,

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೦ ಸೆಕೆಂಡ್‌ಗಳು)

೨೦೧೩-೧೪ರಲ್ಲಿ ೨೭ ಸಾವಿರ ಕೋಟಿ ರೂಪಾಯಿಯಿದ್ದ ಆಯವ್ಯಯ ಹಂಚಿಕೆ, ೧ ಲಕ್ಷ ೩೭ ಸಾವಿರ ಕೋಟಿ ರೂಪಾಯಿಗಳಿಗಿಂತ ಅಧಿಕ ಪ್ರಮಾಣಕ್ಕೆ ಏರಿಸಿರುವುದು ಸರ್ಕಾರದ ಬದ್ಧತೆಯ ಪ್ರತೀಕವಾಗಿದೆ. ಪಿಎಂ-ಕಿಸಾನ್ ಉಪಕ್ರಮದ ಮೂಲಕ, ೧೧ ಕೋಟಿಗೂ ಅಧಿಕ ರೈತರು ನೇರ ಆದಾಯ ಬೆಂಬಲವನ್ನು ಪಡೆದಿದ್ದಾರೆ. ವಿಸ್ತೃತ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳೊಂದಿಗೆ ಆರ್ಥಿಕ ಸಬಲೀಕರಣಕ್ಕೆ ಪುಷ್ಟಿ ನೀಡಲಾಗಿದೆ, ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ಹವಾಮಾನ ಮತ್ತು ಮಾರುಕಟ್ಟೆಯ ಅನಿಶ್ಚಿತತೆಯ ವಿರುದ್ಧ ರಕ್ಷಣೆಯನ್ನು ಒದಗಿಸುತ್ತದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಫಲಾನುಭವಿ ಅರುಣಾಚಲ ಪ್ರದೇಶದ ಜಮೆನ್ಸೋ ಕ್ರಿ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

ಧ್ವನಿ: ಜಮೆನ್ಸೋ ಕ್ರಿ

ಪ್ರಧಾನಿ ನರೇಂದ್ರ ಮೋದಿಯವರ ಮಾರ್ಗದರ್ಶನದಲ್ಲಿ, ಆಹಾರ ಭದ್ರತೆಯಿಂದ ಹಿಡಿದು ರೈತರ ಸಮೃದ್ಧಿಯತ್ತ ಭಾರತದ ಪಯಣ, ದೂರದೃಷ್ಟಿಯೊಂದಿಗೆ, ಶ್ರಮಜೀವಿ ಅನ್ನದಾತರ ಕನಸುಗಳನ್ನು ನನಸಾಗಿಸಲು ವೇಗವಾಗಿ ಸಾಗುತ್ತಿದೆ

<><><>

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ನವದೆಹಲಿಯಲ್ಲಿ ನಿನ್ನೆ ಭಾರತದಲ್ಲಿ ಸರಕು ಸಾಗಾಣೆ ವೆಚ್ಚದ ಮೌಲ್ಯಮಾಪನ ಕುರಿತ ವರದಿಯನ್ನು ಅಧಿಕೃತವಾಗಿ ಬಿಡುಗಡೆ ಮಾಡಿದರು. ಈ ವರದಿ ವಿವಿಧ ಸಾರಿಗೆ ವಿಧಾನಗಳು, ಉತ್ಪನ್ನ ವಿಭಾಗಗಳಾದ್ಯಂತ ಸರಕು ವೆಚ್ಚಗಳಿಗೆ ಚೌಕಟ್ಟನ್ನು ಒದಗಿಸುತ್ತದೆ. ಒಂದು ಟನ್-ಕಿಲೋಮೀಟರ್‌ಗೆ ಸರಕು ವೆಚ್ಚದ ಅಂದಾಜುಗಳ ಜೊತೆಗೆ, ಬಹು-ವಿಧದ ಸೌಲಭ್ಯಗಳ ದಕ್ಷತೆ ಹೆಚ್ಚಿಸುವ ಬಗ್ಗೆ ವರದಿಯಲ್ಲಿ ಉಲ್ಲೇಖವಿದೆ. ಮೇಕ್ ಇನ್ ಇಂಡಿಯಾ ಒಂದು ದಶಕ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಸಚಿವರು, ಕೈಗಾರಿಕಾ ಪಾರ್ಕ್ ಶ್ರೇಯಾಂಕ ವ್ಯವಸ್ಥೆ - ಐಪಿಆರ್‌ಎಸ್ ೩.೦ ಹಾಗೂ ಸ್ಮಾರಕ ನಾಣ್ಯ ಬಿಡುಗಡೆಗೊಳಿಸಿದರು.

<><><><>

ಕೇಂದ್ರ ಜಲಶಕ್ತಿ ಖಾತೆ ಸಚಿವ ರಾಜ್ ಭೂಷಣ್ ಚೌಧರಿ ಮತ್ತು ಬಿಜೆಪಿ ಸಂಸದ ಮನೋಜ್ ತಿವಾರಿ ಅವರು ನವದೆಹಲಿಯಲ್ಲಿಂದು ಬೆಳಿಗ್ಗೆ ನಮೋ ಯುವ ಓಟಕ್ಕೆ ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ರಾಷ್ಟ್ರ ರಾಜಧಾನಿಯ ಸಾವಿರಾರು ಯುವಜನರು ಭಾಗವಹಿಸಿದ್ದರು.

<><><><>

ಚೀನಾದ ಶೆನ್‌ಜೆನ್‌ನಲ್ಲಿ ನಡೆಯುತ್ತಿರುವ ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ಫೈನಲ್‌ನಲ್ಲಿಂದು ಭಾರತದ ಜೋಡಿ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಅಗ್ರ ಶ್ರೇಯಾಂಕಿತ ವಿಶ್ವ ಚಾಂಪಿಯನ್‌ಗಳಾದ ದಕ್ಷಿಣ ಕೊರಿಯಾದ ಕಿಮ್ ವಾನ್ ಹೋ ಮತ್ತು ಸಿಯೊ ಸೆಯುಂಗ್ ಜೇ ಅವರನ್ನು ಎದುರಿಸಲಿದ್ದಾರೆ. ನಿನ್ನೆ ನಡೆದ ಸೆಮಿಫೈನಲ್‌ನಲ್ಲಿ ಭಾರತೀಯ ಜೋಡಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತರಾದ ಮಲೇಷ್ಯಾದ ಆರನ್ ಚಿಯಾ ಮತ್ತು ಸೋಹ್ ವೂಯಿ ಯಿಕ್ ಅವರನ್ನು ೨೧-೧೭, ೨೧-೧೪ ಸೆಟ್‌ಗಳಿಂದ ಸೋಲಿಸಿತು.

<><><><>

ಏಷ್ಯಾ ಕಪ್ ಟಿ-೨೦ ಕ್ರಿಕೆಟ್‌ನಲ್ಲಿ, ಭಾರತ ಇಂದು ದುಬೈನಲ್ಲಿ ನಡೆಯಲಿರುವ ಎರಡನೇ ಸೂಪರ್ ನಾಲ್ಕರ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನದ ವಿರುದ್ಧ ಸೆಣೆಸಲಿದೆ. ಪಂದ್ಯವು ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ. ಈ ಪಂದ್ಯಾವಳಿಯಲ್ಲಿ ಉಭಯ ತಂಡಗಳ ನಡುವಿನ ಎರಡನೇ ಮುಖಾಮುಖಿ ಇದಾಗಿದೆ. ಕಳೆದ ವಾರ ನಡೆದ ಗುಂಪು ಹಂತದ ಪಂದ್ಯದಲ್ಲಿ ಭಾರತ ಪಾಕಿಸ್ತಾನದ ವಿರುದ್ಧ ಏಳು ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು. ಆದರೂ ಇಂದಿನ ಅಂತಿಮ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ವಿಜೇತ ತಂಡ ಫೈನಲ್‌ಗೆ ಹೋಗುವುದರಿಂದ ಹೆಚ್ಚು ಕುತೂಹಲ ಮೂಡಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>